ಸೆಪ್ಟೆಂಬರ್ 22 , 2016

**ಸಾವರಿನ್ ಗೋಲ್ಡ್ ಬಾಂಡುಗಳು , 2016-17 , ಶ್ರೇಣಿ II**

ಭಾರತೀಯ ರಿಸರ್ವ್ ಬ್ಯಾಂಕ್ , ಭಾರತ ಸರ್ಕಾರದ ಜೊತೆಗೆ ಸಮಾಲೋಚಿಸಿ ಸಾವರಿನ್ ಗೋಲ್ಡ್ ಬಾಂಡ್ 2016-17 , ಶ್ರೇಣಿ II ರ ನೀಡಿಕೆಯನ್ನು ಪ್ರಕಟಿಸಿದ್ದಾರೆ. (ಉಲ್ಲೇಖ : ಐಡಿಎಂಡಿ. ಸಿಡಿಡಿ.ಸಂಖ್ಯೆ 462/14.04.050/2016-17 ಮತ್ತು ಐಡಿಎಂಡಿ. ಸಿಡಿಡಿ.ಸಂಖ್ಯೆ 463/14.04.050/2016-17). ಸಾವರಿನ್ ಗೋಲ್ಡ್ ಬಾಂಡ್ ಗಳ ಐದನೇ ಭಾಗದ ವಂತಿಗೆಯು ಸೆಪ್ಟೆಂಬರ್ 01 , 2016 ರಿಂದ ಸೆಪ್ಟೆಂಬರ್ 09 , 2016 ರ ವರೆಗೆ ಆಗಿತ್ತು ಹಾಗೂ ಬಾಂಡ್ ಗಳ ನೀಡಿಕೆಯ ದಿನವು ಸೆಪ್ಟೆಂಬರ್ 23 , 2016 ಆಗಿತ್ತು.

ಬ್ಯಾಂಕ್ ಮತ್ತು ಅಂಚೆ ಕಛೇರಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಿದೆ. ಆದ್ದರಿಂದ , ಯಾವುದೇ ಅಡಚಣೆ ಇಲ್ಲದೆ ಆರ್ ಬಿ ಐ ನ ಇ- ಕುಬೇರ್ (E - Kuber) ವ್ಯವಸ್ಥೆಯಲ್ಲಿ ಅರ್ಜಿಗಳನ್ನು ವಿಶೇಷವಾಗಿ ಅಂಚೆ ಕಛೇರಿಗಳಿಂದ ಅಪ್ಲೋಡ್ ಮಾಡಲು ಸಹಾಯ ಮಾಡುವ ಉದ್ದೇಶದಿಂದ ಸಾವರಿನ್ ಗೋಲ್ಡ್ ಬಾಂಡ್ ಗಳ ನೀಡಿಕೆಯ ದಿನಾಂಕವನ್ನು ಸೆಪ್ಟೆಂಬರ್ 23 , 2016 ರಿಂದ ಸೆಪ್ಟೆಂಬರ್ 30 , 2016 ರ ವರೆಗೆ ಬದಲಾಯಿಸಲು ನಿರ್ಧರಿಸಲಾಗಿದೆ.

ಮೇಲಿನ ಸುತ್ತೋಲೆಯಲ್ಲಿರುವ ಇತರೆ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ .

**ಅನಿರುದ್ಧ ಡಿ ಜಾಧವ್**
**ಸಹಾಯಕ ವ್ಯವಸ್ಥಾಪಕರು**

ಪತ್ರಿಕಾ ಪ್ರಕಟಣೆ : 2016-2017/740